# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಓ ಎಸ್ ನಂ. 66-2016 ಪಿ . ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ನಾಗಮ್ಮ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 22-12-2020. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಎಸ್.ಎ ವಕೀಲರಿಂದಃ**

8. ಲಿಂಗಣ್ಣ ಮೃತಪಟ್ಟ 20 ದಿನಗಳ ನಂತರ ಆತನ ಮರಣದ ವಿಷಯ ನನಗೆ ಗೊತ್ತಾಯಿತು. ಲಿಂಗಣ್ಣನ ಜೀವಿತ ಕಾಲದಲ್ಲಾಗಲಿ, ಆತನ ಮೃತಪಟ್ಟ ನಂತರವಾಗಲಿ ನಾನು ಆತನಿಗೆ ನೋಟಿಸ್ ಕಳಿಸಿಲ್ಲ ಎಂದರೆ ಸರಿ. ನಿಪಿ-3 ರಂತೆ ನೀವೇನಾದೂ ಲಿಂಗಣ್ಣನಿಗೆ ನೋಟಿಸ್ ಕಳಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ವಕೀಲರು ಕಳುಹಿಸಿದ್ದರೇನೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ-3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-3 ರ ಖಂಡಿಕೆ 3 ರಲ್ಲಿ ದಿ.26-12-2015 ರಂದು ಲಿಂಗಣ್ಣನಿಗೆ ನೋಟಿಸ್ ನೀಡಿದ್ದೆ ಎಂದು ಬರೆಸಿದ್ದೀರಿ ಈ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ-3 ಯಾರಿಗೆ ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಪ್ರತಿವಾದಿಗಳ ವಿಳಾಸವನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾಣೆ ಬದಲಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

9. ನೀವು ನಿಮ್ಮ ಸ್ವತ್ತನ್ನು ದಿ.26-03-2014 ರಂದು ರೂ.22,50,000/- ಗಳಿಗೆ ಮೃತ ಲಿಂಗಣ್ಣನಿಗೆ ಮಾರಾಟ ಮಾಡಿದ್ದೇನೆ ಎಂದರೆ ಸಾಕ್ಷಿಯು ನನಗೆ ಅದೇನು ಗೊತ್ತಿಲ್ಲ ಈಗ್ಗೆ 6 ವರ್ಷಗಳ ಹಿಂದೆ ಮೃತ ಲಿಂಗಣ್ಣನಿಗೆ ಮಾರಾಟ ಮಾಡಿದ್ದೇನೆ. ದಿ.25-04-2014 ರಲ್ಲಿ ಮೃತ ಲಿಂಗಣ್ಣ ನನ್ನಿಂದ ಸಾಲ ಪಡೆದಿದ್ದರು ಎಂದರೆ ಸರಿ. ನಾನು ನನ್ನ ದಾವಾ ಸಲ್ಲಿಸುವ ಕಾಲಕ್ಕೆ

ಮಧ್ಯಂತರ ಅರ್ಜಿ 1 ರಂತೆ ಮೃತ ಲಿಂಗಣ್ಣನಿಗೆ ಸ್ವತ್ತನ್ನು ಅಟ್ಯಾಚ್‌ಮೆಂಟ್ ಮಾಡಲು ಕೇಳಿದ್ದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಧ್ಯಂತರ ಅರ್ಜಿ 1 ರಲ್ಲಿ ತೋರಿರುವ ಸ್ವತ್ತು ನಂಜಗೂಡು ತಾಲ್ಲೂಕಿನಲ್ಲಿ ಇರುತ್ತದೆ, ಅದರ ಬಾಜುದಾರರಾಗಿ ತಳವಾರ್ ಮಾದಪ್ಪನವರ ಜಮೀನು, ಶಂಕರಪ್ಪ ನವರ ಜಮೀನು ಇರುತ್ತದೆ. ಮಧ್ಯಂತರ ಅರ್ಜಿ 1 ರ ಪ್ರಮಾಣ ಪತ್ರಿಕೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

10. ನಿಪಿ-1 ನ್ನು ನಾನು ಬ್ಯಾಂಕಿಗೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-1 ರ ಬಗ್ಗೆ ನಾನು ತಿಳಿದುಕೊಳ್ಳುವ ಪ್ರಯತ್ನ ಕೂಡ ಮಾಡಿಲ್ಲ ಎಂದರೆ ಸರಿ. ನಿಪಿ-1 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಮೃತ ಲಿಂಗಣ್ಣ ನಿಮ್ಮ ಕಡೆಯಿಂದ ಏತಕ್ಕಾಗಿ ಸಾಲ ಪಡೆದರು ಸಾಕ್ಷಿಯು ಮುಂದುವರೆದು ಮೃತ ಲಿಂಗಣ್ಣ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಊಟ ಹಾಕಿಸಲು ಸಾಲ ಪಡೆದರು ಎಂದು ನುಡಿಯುತ್ತಾರೆ. ಮೃತ ಲಿಂಗಣ್ಣನಿಗೆ ನನ್ನಿಂದ ಸಾಲ ಪಡೆಯುವ ದರ್ದು ಇರಲಿಲ್ಲ ಎಂದರೆ ಸರಿಯಲ್ಲ. ಮೃತ ಲಿಂಗಣ್ಣ ನನ್ನಿಂದ ಸದರಿ ಸಾಲ ಪಡೆದ 1 ತಿಂಗಳ ನಂತರ ನನಗೆ ನಿಪಿ-1 ನೀಡಿದರು. ಮೃತ ಲಿಂಗಣ್ಣ ಹಾಗೂ ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಎಲ್.ಮಂಜು ಎಂಬುವವರು ನನಗೆ ತಲುಪಿಸಿರುತ್ತಾರೆ ಎಂದರೆ ಸರಿಯಲ್ಲ. ಮೃತ ಲಿಂಗಣ್ಣ ನನ್ನಿಂದ ಯಾವುದೇ ಪಡೆದಿಲ್ಲ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಎಲ್ಲಾ ಒಕ್ಕಣಿಕೆಗಳನ್ನು ನೀವೆ ಬರೆದಿದ್ದೀರಿ ಎಂದರೆ ಸಾಕ್ಷಿಯು ಮೃತ ಲಿಂಗಣ್ಣ ನಿಪಿ-1 ಕ್ಕೆ ಸಹಿ ಮಾಡಿ ಬರೆದು ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ಮುಂಭಾಗದಲ್ಲಾಗಲಿ, ಹಿಂಭಾಗದಲ್ಲಾಗಲಿ ನೀವು ಸಹಿಮಾಡಿಲ್ಲ ಎಂದರೆ ಸರಿ. ನಿಪಿ-1 ರ ಹಿಂಭಾಗದಲ್ಲಿ ಬರೆದಿರುವ ಷರಾಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಗಳು ವಿರುದ್ಧ ಅವರಿಗೆ ತೊಂದರೆ ನೀಡಲೆಂದು ನಾನು ಈ ಸುಳ್ಳ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ, ಅದನ್ನು ನನ್ನ ವಕೀಲರು ಬರೆದಿರುತ್ತಾರೆ. ನಾನು ನನ್ನ ವಕೀಲರಿಗೆ ನಿಪಿ-1 ನೀಡಿ ವಿಷಯವನ್ನೆಲ್ಲಾ ಹೇಳಿ ಬರೆಸಿದೆ.

11. ದಿ.30-01-2016 ರಂದು ಪ್ರತಿವಾದಿ 1 ರವರು ಅವರ ವಕೀಲರು ಮೂಲಕ ನನಗೆ ಪ್ರತ್ಯುತ್ತರದ ನೋಟಿಸ್ ಕಳುಹಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿ

ತೊಂದರೆ ಕೊಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾರು–ಯಾರನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದೀನಿ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**